69

ಮುಹರ್ರಂ
ಮತ್ತು
ಆಶೂರಾ



الحركة النصيحة الإسلامية

ANNASEEHA ISLAMIC MOVEMENT
SURATKAL, MANGALORE - 575014

ಮುಹರ್ರಂ ತಿಂಗಳ ಶ್ರೇಷ್ಠತೆಗಳು

ಮುಹರ್ರಂ ತಿಂಗಳು ಅಲ್ಲಾಹು ಗೌರವಿಸಿದ ಮತ್ತು ಅವನ ಗ್ರಂಥದಲ್ಲಿ ನಮೂದಿಸಿದ ಪವಿತ್ರ ತಿಂಗಳುಗಳಲ್ಲೊಂ-ದಾಗಿದೆ. ಮುಹರ್ರಂ ತಿಂಗಳಿಗೆ ಅನೇಕ ಶ್ರೇಷ್ಠತೆಗಳಿವೆ. ಮುಖ್ಯವಾಗಿ ಮುಹರ್ರಂ ತಿಂಗಳ ಹತ್ತನೇ ದಿನಕ್ಕೆ. ಇದನ್ನು 'ಆಶೂರಾ ದಿನ' ಎಂದು ಕರೆಯುತ್ತಾರೆ.

ಅಲ್ಲಾಹು ಹೇಳುತ್ತಾನೆ: "ಭೂಮ್ಯಾಕಾಶಗಳನ್ನು ಸೃಷ್ಟಿಸಿದ ದಿನದಿಂದ ಅಲ್ಲಾಹನ ಬಳಿ ಅವನ ಗ್ರಂಥದಲ್ಲಿ ತಿಂಗ-ಳುಗಳ ಸಂಖ್ಯೆ ಹನ್ನೆರಡು. ಅವುಗಳಲ್ಲಿ ನಾಲ್ಕು ಪವಿತ್ರ ತಿಂಗಳುಗಳು. ಅದು ನೇರವಾದ ಧರ್ಮ. ಆದ್ದರಿಂದ ಆ ತಿಂಗಳುಗಳಲ್ಲಿ ನೀವು ನಿಮ್ಮ ಮೇಲೆಯೇ ಅನ್ಯಾಯವೆಸ-ಗಬಾರದು." (ತೌಬಾ: 36)

ಅಲ್ಲಾಹು ಈ ತಿಂಗಳನ್ನು 'ಮುಹರ್ರಂ ಎಂಬ ಅಲ್ಲಾಹನ ತಿಂಗಳು' (ಶಹ್ರುಲ್ಲಾಹಿಲ್ ಮುಹರ್ರಂ) ಎಂದು ಕರೆಯುವ

ಮೂಲಕ ಇದಕ್ಕೆ ಇತರ ತಿಂಗಳುಗಳಿಗೆ ಇಲ್ಲದ ಶ್ರೇಷ್ಠತೆಯನ್ನು ನೀಡಿದ್ದಾನೆ. ಅವನು ಈ ತಿಂಗಳನ್ನು ತನ್ನ ಹೆಸರಿಗೆ ಸೇರಿಸಿರುವುದು, ತಾನು ಈ ತಿಂಗಳನ್ನು ಸ್ವತಃ ಪವಿತ್ರವಾಗಿ ಪರಿಗಣಿಸಿರುವುದರಿಂದ ನೀವು ಕೂಡ ಈ ತಿಂಗಳನ್ನು ಪವಿತ್ರವೆಂದು ಪರಿಗಣಿಸಬೇಕೆಂದು ನಮಗೆ ಸೂಚನೆ ನೀಡುವುದಕ್ಕಾಗಿದೆ.

ಮುಹರ್ರಂ ತಿಂಗಳು ಸೇರಿದಂತೆ ನಾಲ್ಕು ತಿಂಗಳುಗಳನ್ನು ಅಲ್ಲಾಹು ಪವಿತ್ರಗೊಳಿಸಿದ್ದಾನೆಂದು ಪ್ರವಾದಿ(ಸ) ರವರು ಕೂಡ ನಮಗೆ ಇದನ್ನು ವಿವರಿಸಿಕೊಟ್ಟಿದ್ದಾರೆ.

ಅಬೂ ಬಕ್ರ(ರ) ರಿಂದ ವರದಿ: ಪ್ರವಾದಿ(ಸ) ರವರು ಹೇಳುತ್ತಾರೆ: “ಅಲ್ಲಾಹು ಭೂಮ್ಯಾಕಾಶಗಳನ್ನು ಸೃಷ್ಟಿಸಿದ ದಿನ ಕಾಲವು ಹೇಗಿತ್ತೋ ಹಾಗೆಯೇ ಇಂದೂ ಅದು ಸಾಗುತ್ತಾ ಬಂದಿದೆ. ವರ್ಷದಲ್ಲಿ ಹನ್ನೆರಡು ತಿಂಗಳುಗಳಿವೆ. ಅವುಗಳಲ್ಲಿ ನಾಲ್ಕು ಪವಿತ್ರ ತಿಂಗಳುಗಳು. ಮೂರು ತಿಂಗಳುಗಳು ಒಂದರ ಹಿಂದೆ ಒಂದಾಗಿ ಬರುತ್ತದೆ. ಅವು

ದುಲ್ ಕಅ್‌ದ, ದುಲ್ ಹಿಜ್ಜ ಮತ್ತು ಮುಹರ್ರಂ. (ನಾಲ್ಕ-ನೆಯದು) ಜುಮಾದಾ ಹಾಗೂ ಶಅ್‌ಬಾನ್ ತಿಂಗಳುಗಳ ನಡುವೆ ಬರುವ ಮುದರ್ ಗೋತ್ರದ ರಜಬ್ ತಿಂಗಳು." (ಅಲ್‌ಬುಖಾರಿ ಮತ್ತು ಮುಸ್ಲಿಮ್)

ಮುಹರ್ರಂ ತಿಂಗಳು ಪವಿತ್ರ ತಿಂಗಳುಗಳಲ್ಲೇ ಅತಿಶ್ರೇಷ್ಠವೆಂಬ ಅಭಿಪ್ರಾಯವು ವಿದ್ವಾಂಸರಲ್ಲಿ ಒಂದು ಗುಂಪಿಗಿದೆ.

ಇಬ್ನ್ ರಜಬ್ ಹೇಳುತ್ತಾರೆ: "ಪವಿತ್ರ ತಿಂಗಳುಗಳಲ್ಲಿ ಯಾವುದು ಶ್ರೇಷ್ಠವೆಂಬ ವಿಷಯದಲ್ಲಿ ವಿದ್ವಾಂಸರು ಭಿನ್ನ-ಮತದಲ್ಲಿದ್ದಾರೆ. ಅಲ್‌ಹಸನುಲ್ ಬಸ್ರಿ ಮುಂತಾದವರು ಹೇಳುವ ಪ್ರಕಾರ ಅತಿಶ್ರೇಷ್ಠವಾದುದು ಅಲ್ಲಾಹನ ತಿಂಗಳಾದ ಮುಹರ್ರಂ ಆಗಿದೆ. ಇತ್ತೀಚಿನ ವಿದ್ವಾಂಸರಲ್ಲಿ ಒಂದು ಗುಂಪು ಈ ಅಭಿಪ್ರಾಯವನ್ನು ಬಲಪಡಿಸಿದೆ." (ಲತಾಇಫುಲ್ ಮಆರಿಫ್, ಪುಟ 70)

ಅನ್ನಸಾಈ ಮತ್ತಿತರರು ಅಬೂ ದರ್ರ್(ರ) ರಿಂದ ವರದಿ ಮಾಡಿದ ಒಂದು ಹದೀಸ್ ಇದೇ ಅಭಿಪ್ರಾಯವನ್ನು ಸೂಚಿಸುತ್ತದೆ. ಅಬೂ ದರ್ರ್(ರ) ಹೇಳುತ್ತಾರೆ: ನಾನು ಪ್ರವಾದಿ(ಸ) ರವರೊಂದಿಗೆ ಕೇಳಿದೆ: "ಯಾವ ರಾತ್ರಿ ಮತ್ತು ಯಾವ ತಿಂಗಳು ಶ್ರೇಷ್ಠ?" ಅವರು ಹೇಳಿದರು: "ರಾತ್ರಿಯಲ್ಲಿ ಶ್ರೇಷ್ಠವಾದುದು ಅದರ ಮಧ್ಯಭಾಗ ಮತ್ತು ತಿಂಗಳುಗಳಲ್ಲಿ ಶ್ರೇಷ್ಠವಾದುದು ನೀವು ಮುಹರ್ರಂ ಎಂದು ಕರೆಯುವ ಅಲ್ಲಾಹನ ತಿಂಗಳು." (ಅನ್ನಸಾಈ ಅಲ್‌ಕುಬ್ರಾದಲ್ಲಿ)

ಇಬ್ನ್ ರಜಬ್ ಹೇಳುತ್ತಾರೆ: "ಅಲ್‌ಹಸನ್ ಅಲ್‌ಬಸ್ರಿ ಮುರ್ಸಲ್ ಆಗಿ ವರದಿ ಮಾಡಿದ ಹದೀಸಿನಲ್ಲಿರುವಂತೆ, ಇಲ್ಲಿ 'ತಿಂಗಳುಗಳಲ್ಲೇ ಶ್ರೇಷ್ಠ'ವೆಂದು ಅನಿರ್ಬಂಧಿತವಾಗಿ ಹೇಳಿರುವುದನ್ನು ರಮದಾನ್ ತಿಂಗಳ ನಂತರ ಎಂದು ಅರ್ಥೈಸಬೇಕಾಗಿದೆ."

ಮುಹರ್ರಂ ತಿಂಗಳ ನಿಯಮಗಳು

1. ಈ ತಿಂಗಳಲ್ಲಿ ಯುದ್ಧ ಮಾಡುವುದು ನಿಷಿದ್ಧವಾಗಿದೆ. ಯುದ್ಧ ಆರಂಭಿಸಬಾರದು ಎನ್ನುವುದು ಪವಿತ್ರ ತಿಂಗಳುಗಳ ನಿಯಮಗಳಲ್ಲೊಂದು.

   ಇಬ್ನ್ ಕಸೀರ್ ಹೇಳುತ್ತಾರೆ: "ಪವಿತ್ರ ತಿಂಗಳಲ್ಲಿ ಯುದ್ಧ ಆರಂಭಿಸುವುದು ನಿಷಿದ್ಧವೆಂಬ ವಿಷಯದಲ್ಲಿ ವಿದ್ವಾಂಸರ ಮಧ್ಯೆ ಭಿನ್ನಮತವಿದೆ. ಅದು ರದ್ದಾಗಿದೆಯೋ ಇಲ್ಲವೋ ಎಂಬ ವಿಷಯದಲ್ಲಿ ಅವರಲ್ಲಿ ದ್ವಂದ್ವ ಅಭಿಪ್ರಾಯಗಳಿವೆ. ಪ್ರಸಿದ್ಧ ಅಭಿಪ್ರಾಯದ ಪ್ರಕಾರ ಈ ನಿಯಮ (ಯುದ್ಧ ಆರಂಭಿಸಬಾರದು) ರದ್ದಾಗಿದೆ. ಕಾರಣ ಅಲ್ಲಾಹು ಇಲ್ಲಿ ಹೇಳುತ್ತಾನೆ: "ಆದ್ದರಿಂದ ಆ ತಿಂಗಳುಗಳಲ್ಲಿ ನೀವು

ನಿಮ್ಮ ಮೇಲೆಯೇ ಅನ್ಯಾಯವೆಸಗಬಾರದು.” (ಅತ್ತೌಬ 36) ನಂತರ ಅಲ್ಲಾಹು ಮುಶ್ರಿಕರ ವಿರುದ್ಧ ಯುದ್ಧ ಮಾಡಲು ಆದೇಶಿಸುತ್ತಾನೆ.

ಎರಡನೇ ಅಭಿಪ್ರಾಯ: ಪವಿತ್ರ ತಿಂಗಳಲ್ಲಿ ಯುದ್ಧ ಆರಂಭಿಸುವುದು ನಿಷಿದ್ಧ. ಅದನ್ನು ರದ್ದುಪಡಿಸಲಾಗಿಲ್ಲ. ಕಾರಣ ಅಲ್ಲಾಹು ಹೇಳುತ್ತಾನೆ: “ಪವಿತ್ರ ತಿಂಗಳಿಗೆ ಬದಲಾಗಿ ಪವಿತ್ರ ತಿಂಗಳು. ಪವಿತ್ರವಾದ ಪ್ರತಿಯೊಂದು ವಿಷಯದಲ್ಲೂ (ಅದಕ್ಕೆ ಸಮಾನವಾದ) ಪ್ರತೀಕಾರವಿದೆ. ಆದ್ದರಿಂದ ನಿಮ್ಮ ಮೇಲೆ ಅತಿರೇಕವೆಸಗಿದವರ ಮೇಲೆ ಅವರು ನಿಮ್ಮ ಮೇಲೆ ಅತಿರೇಕವೆಸಗಿದಂತೆ ನೀವೂ ಅವರ ಮೇಲೆ ಅತಿರೇಕವೆಸಗಿರಿ.” (ಅಲ್‌ಬಕರ 194) ನಂತರ ಹೇಳುತ್ತಾನೆ: “ಪವಿತ್ರ ತಿಂಗಳುಗಳು ಕಳೆದರೆ ಮುಶ್ರಿಕರ ವಿರುದ್ಧ

ಯುದ್ಧ ಮಾಡಿರಿ." (ತಫ್ಸೀರ್ ಇಬ್ನ್ ಕಸೀರ್ 2/468-469)

ಅರಬ್ ಜನರು ಅಜ್ಞಾನಕಾಲದಲ್ಲೂ ಮುಹರ್ರಂ ತಿಂಗಳನ್ನು ಗೌರವಿಸುತ್ತಿದ್ದರು. ಈ ತಿಂಗಳಿಗೆ ಅವರು ಅತ್ಯಧಿಕ ಪಾವಿತ್ರ್ಯತೆ ಕಲ್ಪಿಸುತ್ತಿದ್ದುದರಿಂದ ಇದನ್ನು ಅವರು ಅಲ್ಲಾಹನ ಕಿವುಡು ತಿಂಗಳು (ಶಹ್ರುಲ್ಲಾಹಿಲ್ ಅಸಮ್) ಎಂದು ಕರೆಯುತ್ತಿದ್ದರು.

2. ಮುಹರ್ರಂ ತಿಂಗಳಲ್ಲಿ ಉಪವಾಸ ಆಚರಿಸುವುದು ಐಚ್ಛಿಕ ಕರ್ಮಗಳಲ್ಲೇ ಅತಿಶ್ರೇಷ್ಠವಾಗಿದೆ.

ಅಬೂ ಹುರೈರ(ರ) ರಿಂದ ವರದಿ: ಪ್ರವಾದಿ(ಸ) ರವರು ಹೇಳುತ್ತಾರೆ: "ರಮದಾನ್ ತಿಂಗಳ ನಂತರ ಉಪವಾಸ ಆಚರಿಸಲು

ಅತಿಶ್ರೇಷ್ಠವಾದ ತಿಂಗಳು ನೀವು ಮುಹರ್ರಂ ಎಂದು ಕರೆಯುವ ಅಲ್ಲಾಹನ ತಿಂಗಳು. ಕಡ್ಡಾಯ ನಮಾಝ್‌ಗಳ ನಂತರ ಅತಿಶ್ರೇ-ಷ್ಠವಾದ ನಮಾಝ್ ರಾತ್ರಿ ನಿರ್ವಹಿಸುವ ನಮಾಝ್." (ಮುಸ್ಲಿಂ)

ಮುಹರ್ರಂನಲ್ಲಿ ಉಪವಾಸ ಆಚರಿಸುವುದರ ಶ್ರೇಷ್ಠತೆಯನ್ನು ವಿವರಿಸಿಕೊಡುತ್ತಾ ಪ್ರವಾ-ದಿ(ಸ) ರವರು ಹೇಳುತ್ತಾರೆ: "ರಮದಾನ್ ತಿಂಗಳ ನಂತರ ಉಪವಾಸ ಆಚರಿಸಲು ಅತಿಶ್ರೇಷ್ಠವಾದ ತಿಂಗಳು ನೀವು ಮುಹರ್ರಂ ಎಂದು ಕರೆಯುವ ಅಲ್ಲಾಹನ ತಿಂಗಳು." (ಮುಸ್ಲಿಂ)

ಈ ಹದೀಸ್ ಏನನ್ನು ಸೂಚಿಸುತ್ತದೆ? ತಿಂಗಳು ಪೂರ್ತಿ ಉಪವಾಸ ಆಚರಿಸುವುದನ್ನು ಸೂ-ಚಿಸುತ್ತದೋ ಅಥವಾ ತಿಂಗಳ ಬಹುಭಾಗ

ಉಪವಾಸ ಆಚರಿಸುವುದನ್ನು ಸೂಚಿಸುತ್ತ-ದೋ? ಎಂಬ ವಿಷಯದಲ್ಲಿ ವಿದ್ವಾಂಸರಲ್ಲಿ ಭಿನ್ನಮತವಿದೆ.

ಹದೀಸಿನ ಬಾಹ್ಯಾರ್ಥ ಪ್ರಕಾರ -ಹೆಚ್ಚು ಬಲ್ಲವನು ಅಲ್ಲಾಹು- ಇದು ತಿಂಗಳು ಪೂರ್ತಿ ಉಪವಾಸ ಆಚರಿಸುವುದನ್ನು ಸೂಚಿಸುತ್ತದೆ. ಆದರೆ ಕೆಲವು ವಿದ್ವಾಂಸರು ಇದಕ್ಕೆ ತಿಂಗಳು ಪೂರ್ತಿ ಉಪವಾಸ ಆಚರಿಸುವುದಲ್ಲ, ಬದಲಾಗಿ ತಿಂಗಳ ಬಹುಭಾಗ ಉಪವಾಸ ಆಚರಿಸುವುದು ಅಪೇಕ್ಷಣೀಯವೆಂಬ ಅರ್ಥ-ವನ್ನು ನೀಡಿದ್ದಾರೆ. ಕಾರಣ, ಆಯಿಶಾ(ರ) ರವರು ಹೇಳುತ್ತಾರೆ: ರಮದಾನ್ ತಿಂಗಳಲ್ಲೇ ಹೊರತು ಇತರ ಯಾವುದೇ ತಿಂಗಳಲ್ಲೂ ಅಲ್ಲಾಹನ ಸಂದೇಶವಾಹಕರು ತಿಂಗಳು ಪೂರ್ತಿ ಉಪವಾಸ ಆಚರಿಸಿದ್ದನ್ನು ನಾನು

ಕಂಡಿಲ್ಲ. ಶಅ್‌ಬಾನ್ ತಿಂಗಳ ಹೊರತು ಇತರ ಯಾವುದೇ ತಿಂಗಳಲ್ಲೂ ಅವರು ತಿಂಗಳ ಬಹುಭಾಗ ಉಪವಾಸ ಆಚರಿಸಿದ್ದನ್ನು ನಾನು ಕಂಡಿಲ್ಲ. ಇದನ್ನು ಮುಸ್ಲಿಂ ವರದಿ ಮಾಡಿದ್ದಾರೆ. (ಮುಸ್ಲಿಂ)

ಮುಹರ್ರಂ ಮತ್ತು ಆಶೂರಾ ದಿನ:

ಆಶೂರ ಮುಹರ್ರಂ ತಿಂಗಳ ಹತ್ತನೇ ದಿನ. ಈ ದಿನಕ್ಕೆ ಮಹತ್ವವಿದೆ ಮತ್ತು ಈ ದಿನದ ಉಪವಾಸಕ್ಕೆ ಶ್ರೇಷ್ಠತೆಯಿದೆ. ಅಲ್ಲಾಹು ಈ ದಿನವನ್ನು ವಿಶೇಷಗೊಳಿಸಿ-ದ್ದಾನೆ. ಪ್ರವಾದಿ(ಸ) ರವರು ಈ ದಿನದ ಉಪವಾಸವನ್ನು ಪ್ರೋತ್ಸಾಹಿಸಿದ್ದಾರೆ.

ಆಶೂರ ದಿನದ ಶ್ರೇಷ್ಠತೆಗಳು:

ಆಶೂರ ದಿನ ಅಲ್ಲಾಹು ಮೂಸಾ(ಅ) ಮತ್ತು ಅವರ

ಅನುಯಾಯಿಗಳನ್ನು ರಕ್ಷಿಸಿದ ಹಾಗೂ ಫಿರ್‌ಔನ್ ಮತ್ತು ಅವನ ಜನರನ್ನು ಮುಳುಗಿಸಿ ಕೊಂದ ದಿನ. ಆದ್ದರಿಂದ ಅಲ್ಲಾಹನಿಗೆ ಕೃತಜ್ಞತೆಯಾಗಿ ಮೂಸಾ(ಅ) ಆ ದಿನ ಉಪವಾಸ ಆಚರಿಸಿದರು. ನಂತರ ಪ್ರವಾದಿ(ಸ) ರವರು ಕೂಡ ಆ ದಿನ ಉಪವಾಸ ಆಚರಿಸಿದರು.

ಇಬ್ನ್ ಅಬ್ಬಾಸ್(ರ) ರವರು ಹೇಳುತ್ತಾರೆ: ಪ್ರವಾದಿ(ಸ) ರವರು ಮದೀನಕ್ಕೆ ಬಂದಾಗ ಅಲ್ಲಿ ಯಹೂದರು ಆಶೂರ ದಿನ ಉಪವಾಸ ಆಚರಿಸುವುದನ್ನು ಕಂಡರು. ಅದರ ಬಗ್ಗೆ ಅವರೊಂದಿಗೆ (ಯಹೂದರೊಂದಿಗೆ) ಕೇಳಿದಾಗ ಅವರು ಹೇಳಿದರು: "ಈ ದಿನ ಅಲ್ಲಾಹು ಮೂಸಾ(ಅ) ರಿಗೆ ಮತ್ತು ಬನೂ ಇಸ್ರಾಈಲರಿಗೆ ಫಿರ್‌ಔನನ ವಿರುದ್ಧ ವಿಜಯವನ್ನು ನೀಡಿದ ದಿನವಾಗಿದೆ. ಆದ್ದರಿಂದ ಈ ದಿನವನ್ನು ಗೌರವಿಸಲು ನಾವು ಇಂದು ಉಪವಾಸ ಆಚರಿಸುತ್ತೇವೆ." ಆಗ ಪ್ರವಾದಿ(ಸ) ರವರು ಹೇಳಿದರು: "ಮೂಸಾ(ಅ)ರಿಗೆ ನಿಮಗಿಂತಲೂ ಹೆಚ್ಚು

ಹತ್ತಿರವಾಗಿರುವವರು ನಾವು.” ಹೀಗೆ ಅವರು ಆ ದಿನ ಉಪವಾಸ ಆಚರಿಸಲು ಆದೇಶಿಸಿದರು. (ಅಲ್‌ಬುಖಾರಿ ಮತ್ತು ಮುಸ್ಲಿಂ)

ಆಶೂರ ಉಪವಾಸದ ವಿಷಯದಲ್ಲಿ ನಾಲ್ಕು ಹಂತಗಳಿವೆ.

1. ಮಕ್ಕಾದಲ್ಲಿದ್ದಾಗ ಪ್ರವಾದಿಯವರು(ಸ) ಆ ದಿನ ಉಪವಾಸ ಆಚರಿಸುತ್ತಿದ್ದರು. ಆದರೆ ಆ ದಿನ ಉಪವಾಸ ಆಚರಿಸಬೇಕೆಂದು ಅವರು ಸಹಾಬಿಗಳಿಗೆ ಆದೇಶ ನೀಡಿರಲಿಲ್ಲ.

   ಅಲ್‌ಬುಖಾರಿ ಮತ್ತು ಮುಸ್ಲಿಮ್‌ನಲ್ಲಿರುವಂತೆ ಆಯಿಶಾ(ರ) ಹೇಳುತ್ತಾರೆ: “ಆಶೂರ ದಿನ ಕುರೈಶರು ಅಜ್ಞಾನಕಾಲದಲ್ಲಿ ಉಪವಾಸ ಆಚರಿಸುತ್ತಿದ್ದ ಒಂದು ದಿನವಾಗಿದೆ. ಪ್ರವಾದಿ-(ಸ) ರವರು ಕೂಡ ಆ ದಿನ ಉಪವಾಸ ಆಚ-ರಿಸುತ್ತಿದ್ದರು. ಅವರು ಮದೀನಕ್ಕೆ ಬಂದಾಗ

ಆ ದಿನ ಉಪವಾಸ ಆಚರಿಸಿದರು ಮತ್ತು ಆಚರಿಸುವಂತೆ ಜನರಿಗೆ ಆದೇಶ ನೀಡಿದರು. ಆದರೆ ರಮದಾನ್ ತಿಂಗಳ ಉಪವಾಸ ಕಡ್ಡಾಯವಾದಾಗ ಅವರು ರಮದಾನ್ ತಿಂಗಳಲ್ಲಿ ಉಪವಾಸ ಆಚರಿಸತೊಡಗಿದರು ಮತ್ತು ಆಶೂರ ದಿನದ ಉಪವಾಸವನ್ನು (ಕಡ್ಡಾಯವನ್ನು) ಬಿಟ್ಟರು. ಇಷ್ಟವಿರುವವರು ಆ ದಿನ ಉಪವಾಸ ಆಚರಿಸುತ್ತಿದ್ದರು ಮತ್ತು ಇಷ್ಟವಿಲ್ಲದವರು ಉಪವಾಸ ಆಚರಿಸುತ್ತಿರಲಿಲ್ಲ." (ಅಲ್‌ಬುಖಾರಿ ಮತ್ತು ಮುಸ್ಲಿಂ)

ಅಲ್‌ಬುಖಾರಿಯ ವರದಿಯಲ್ಲಿ ಹೀಗಿದೆ: ಆಗ ಪ್ರವಾದಿ(ಸ) ರವರು ಹೇಳಿದರು: ಇಷ್ಟವಿರುವವರು ಆ ದಿನ ಉಪವಾಸ ಆಚರಿಸಲಿ ಮತ್ತು ಇಷ್ಟವಿಲ್ಲದವರು ಉಪವಾಸ ಆಚರಿಸಬೇಕಾಗಿಲ್ಲ. (ಅಲ್‌ಬುಖಾರಿ)

2. ಪ್ರವಾದಿ(ಸ) ರವರು ಮದೀನಕ್ಕೆ ಬಂದಾಗ ಅಲ್ಲಿ ಅಹ್ಲೆ ಕಿತಾಬ್‌ನವರು (ಯಹೂದಿಗಳು ಮತ್ತು ಕ್ರೈಸ್ತರು) ಆಶೂರ ದಿನ ಉಪವಾಸ ಆಚರಿಸುವುದನ್ನು ಮತ್ತು ಆ ದಿನಕ್ಕೆ ಗೌರವ ನೀಡುವುದನ್ನು ಕಂಡರು. ಆಗ ಅವರು ಸಹ ಆ ದಿನ ಉಪವಾಸ ಆಚರಿಸಿದರು ಮತ್ತು ಉಪವಾಸ ಆಚರಿಸುವಂತೆ ಜನರಿಗೆ ಆದೇಶ-ವಿತ್ತರು. ತಮಗೆ ಆಜ್ಞೆಯಿಲ್ಲದ ವಿಷಯಗಳಲ್ಲಿ ಅಹ್ಲೆ ಕಿತಾಬ್‌ಗಳನ್ನು ಅನುಕರಿಸುವುದನ್ನು ಅವರು ಆಗ ಇಷ್ಟಪಡುತ್ತಿದ್ದರು. ಅವರು ಈ ಉಪವಾಸಕ್ಕೆ ಎಷ್ಟು ಪ್ರೋತ್ಸಾಹ ನೀಡಿದರೆಂ-ದು ಪುಟ್ಟ ಮಕ್ಕಳು ಸಹ ಅಂದು ಉಪವಾಸ ಆಚರಿಸುತ್ತಿದ್ದರು.

3. ರಮದಾನ್ ತಿಂಗಳ ಉಪವಾಸ ಕಡ್ಡಾಯ-ವಾದಾಗ ಪ್ರವಾದಿ(ಸ) ರವರು ಆಶೂರ ದಿನ

ಉಪವಾಸ ಆಚರಿಸಬೇಕೆಂಬ ಆದೇಶವನ್ನು ಕೈಬಿಟ್ಟರು. ಪ್ರವಾದಿ(ಸ) ರವರು ಹೇಳುತ್ತಾರೆ: "ಆಶೂರ ಅಲ್ಲಾಹನ ದಿನಗಳಲ್ಲಿ ಒಳಪಟ್ಟ ಒಂದು ದಿನವಾಗಿದೆ. ಆದ್ದರಿಂದ ಇಷ್ಟವಿರುವ-ವರು ಆ ದಿನ ಉಪವಾಸ ಆಚರಿಸಲಿ ಮತ್ತು ಇಷ್ಟವಿಲ್ಲದವರು ಉಪವಾಸ ಆಚರಿಸಬೇಕಾ-ಗಿಲ್ಲ." (ಮುಸ್ಲಿಂ)

ಮುಸ್ಲಿಮ್‌ರ ಇನ್ನೊಂದು ವರದಿಯಲ್ಲಿ ಹೀಗಿದೆ: "ನಿಮ್ಮಲ್ಲಿ ಇಷ್ಟವಿರುವವರು ಆ ದಿನ ಉಪವಾಸ ಆಚರಿಸಲಿ ಮತ್ತು ಇಷ್ಟವಿಲ್ಲದವ-ರು ಉಪವಾಸ ಆಚರಿಸಬೇಕಾಗಿಲ್ಲ."

4. ಪ್ರವಾದಿ(ಸ) ರವರು ತಮ್ಮ ಬದುಕಿನ ಕೊನೆಯ ಕಾಲದಲ್ಲಿ ಆಶೂರ ದಿನ ಮಾತ್ರ ಉಪವಾಸ ಆಚರಿಸಬಾರದು, ಅಹ್ಲೆ

ಕಿತಾಬ್‌ನವರಿಗೆ ವಿರುದ್ಧವಾಗುವುದಕ್ಕಾಗಿ ಅದಕ್ಕೆ ಇನ್ನೊಂದು ದಿನವನ್ನು (ಒಂಬತ್ತನೇ ದಿನವನ್ನು) ಸೇರಿಸಿ ಉಪವಾಸ ಆಚರಿಸಬೇ-ಕೆಂದು ನಿರ್ಧರಿಸಿದರು.

ಇಬ್ನ್ ಅಬ್ಬಾಸ್(ರ) ಹೇಳುತ್ತಾರೆ: ಪ್ರವಾದಿ(ಸ) ರವರು ಆಶೂರ ದಿನ ಉಪವಾಸ ಆಚರಿಸಿ ಉಪವಾಸ ಆಚರಿಸಬೇಕೆಂದು ಆದೇಶ ನೀಡಿದಾಗ ಜನರು ಕೇಳಿದರು: "ಅಲ್ಲಾಹನ ಸಂದೇಶವಾಹಕರೇ! ಅದು ಯಹೂದರು ಮತ್ತು ಕ್ರೈಸ್ತರು ಗೌರವಿಸುವ ದಿನವಲ್ಲವೇ?" ಪ್ರವಾದಿ(ಸ) ರವರು ಹೇಳಿದರು: "ಅಲ್ಲಾಹು ಇಚ್ಛಿಸಿದರೆ ಮುಂದಿನ ವರ್ಷ ನಾವು ಒಂಬ-ತ್ತನೇ ದಿನವೂ ಉಪವಾಸ ಆಚರಿಸುವೆವು." ಇಬ್ನ್ ಅಬ್ಬಾಸ್(ರ) ಹೇಳುತ್ತಾರೆ: ಆದರೆ ಮುಂದಿನ ವರ್ಷ ಬರುವುದಕ್ಕೆ ಮೊದಲೇ ಪ್ರ-

ವಾದಿ(ಸ) ರವರು ನಿಧನರಾದರು. (ಮುಸ್ಲಿಂ)

ಆಶೂರ ಉಪವಾಸದ ಶ್ರೇಷ್ಠತೆಗಳು:

ಆಶೂರ ದಿನದ ಉಪವಾಸದ ಬಗ್ಗೆ ಪ್ರವಾದಿ(ಸ) ರವರೊಂದಿಗೆ ಕೇಳಲಾದಾಗ ಅವರು ಹೇಳಿದರು: "ಅದು ಹಿಂದಿನ ವರ್ಷದ ಪಾಪಗಳನ್ನು ಅಳಿಸಬೇಕೆಂದು ನಾನು ಅಲ್ಲಾಹನಲ್ಲಿ ಅಪೇಕ್ಷಿಸುತ್ತೇನೆ." (ಮುಸ್ಲಿಂ)

ಹತ್ತನೇ ದಿನ ಉಪವಾಸ ಆಚರಿಸುವ ಮುಸಲ್ಮಾನನಿಗೆ ಈ ಮಹಾ ಪುಣ್ಯವು ಲಭ್ಯವಾಗುತ್ತದೆ. ಆದರೆ ಕೆಲವು ವಿದ್ವಾಂಸರು ಕರಾಹತ್ ಎಂದು ಹೇಳಿರುವುದರ ಹೊರತಾಗಿಯೂ ಹತ್ತನೇ ದಿನ ಮಾತ್ರ ಉಪವಾಸ ಆಚರಿಸುವವರಿಗೂ ಈ ಪುಣ್ಯ ಲಭ್ಯವಾಗುತ್ತದೆ. ಆದರೆ ಅದರೊಂದಿಗೆ ಒಂಬತ್ತನೇ ದಿನವೂ ಉಪವಾಸ ಆಚರಿಸಿದರೆ ಪುಣ್ಯವು ಅಧಿಕವಾಗುತ್ತದೆ.

ಇಬ್ನ್ ಅಬ್ಬಾಸ್(ರ) ವರದಿ ಮಾಡಿದ ಹದೀಸಿನಲ್ಲಿ ಪ್ರವಾದಿ(ಸ) ರವರು ಹೇಳುತ್ತಾರೆ: "ನಾನು ಮುಂದಿನ ವರ್ಷದ ತನಕ ಜೀವಂತ ಉಳಿದರೆ ಒಂಬತ್ತನೇ ದಿನ ಕೂಡ ಉಪವಾಸ ಆಚರಿಸುತ್ತೇನೆ."

ಆಶೂರಾ ದಿನದ ನೂತನಾಚಾರಗಳು:

ಶೈಖ್ ಅಲ್‌ಫೌಝಾನ್ ಹೇಳುತ್ತಾರೆ: "ಈ ದಿನದ ವಿಷಯದಲ್ಲಿ ಎರಡು ಗುಂಪುಗಳು ದಾರಿ ತಪ್ಪಿವೆ. ಒಂದು ಯಹೂದರಿಗೆ ಹೋಲಿಕೆಯಾದ ಗುಂಪು. ಅವರು ಆಶೂರ ದಿನವನ್ನು ಹಬ್ಬದ ಮತ್ತು ಸಂತಸದ ಋತುವಾಗಿ ಮಾಡಿಕೊಂಡರು. ಅವರು ಆ ದಿನ ಮೆಹಂದಿ ಹಚ್ಚು-ವುದು, ಕಾಡಿಗೆ ಹಚ್ಚುವುದು, ಕುಟುಂಬಕ್ಕೆ ಬೇಕಾಬಿಟ್ಟಿ ಖರ್ಚು ಮಾಡುವುದು, ರುಚಿ ರುಚಿಯಾದ, ಬಗೆಬಗೆಯ ಆಹಾರಗಳನ್ನು ತಯಾರಿಸುವುದು ಮುಂತಾದ ಕೆಟ್ಟ-ದ್ದನ್ನು ಕೆಟ್ಟದ್ದರ ಮೂಲಕ ಮತ್ತು ನೂತನಾಚಾರವನ್ನು

ನೂತನಾಚಾರದ ಮೂಲಕ ಎದುರಿಸುವ ಅವಿವೇಕಿಗಳ ಕೆಲಸಗಳನ್ನು ಮಾಡುತ್ತಾ ತಮ್ಮ ಸಂತಸವನ್ನು ಪ್ರಕಟಿಸುತ್ತಾರೆ.

ಇನ್ನೊಂದು ಗುಂಪು ಅಲ್‌ಹುಸೈನ್ ಇಬ್ನ್ ಅಲೀ(ರ) ಯವರ ಹತ್ಯೆಯ ಕಾರಣ ಆಶೂರ ದಿನವನ್ನು ಶೋಕಾಚರಣೆಯ, ದುಃಖದ ಮತ್ತು ರೋದನದ ದಿನವಾಗಿ ಮಾಡಿಕೊಂಡರು. ಅವರು ಆ ದಿನ ಕೆನ್ನೆಗೆ ಹೊಡೆಯುವುದು, ಅಂಗಿಯನ್ನು ಹರಿಯುವುದು, ಶೋಕಗೀತೆಗಳನ್ನು ಹಾಡುವುದು, ಸತ್ಯಕ್ಕಿಂತಲೂ ಸುಳ್ಳು ಹೆಚ್ಚಿರುವ ಕಥೆಗಳನ್ನು ಹೇಳುವುದು ಮುಂತಾದ ಅಜ್ಞಾನಕಾಲದ ಚಿಹ್ನೆಗಳನ್ನು ಪ್ರಕಟಿಸುತ್ತಾರೆ. ಫಿತ್ನದ ಬಾಗಿಲನ್ನು ತೆರೆಯುವುದು ಮತ್ತು ಸಮುದಾಯದ ಮಧ್ಯೆ ಒಡಕನ್ನು ಮೂಡಿಸುವುದು ಇವರ ಉದ್ದೇಶವಾಗಿದೆ. ಇದು ತಾನು ಇಹಲೋಕದಲ್ಲಿ ನಿರ್ವಹಿಸಿದ ಕರ್ಮಗ-ಳೆಲ್ಲವೂ ನಿಷ್ಫಲವಾದರೂ ತಾನು ಮಾಡುತ್ತಿರುವುದು

ಅತ್ಯುತ್ತಮ ಕರ್ಮವೆಂದು ಭಾವಿಸುವವನ ಕರ್ಮವಾಗಿದೆ.

ಆದರೆ ಅಲ್ಲಾಹು ಅಹ್ಲುಸ್ಸುನ್ನದವರಿಗೆ ಮಾರ್ಗದರ್ಶನ ಮಾಡಿದನು. ಆ ದಿನ ಉಪವಾಸ ಆಚರಿಸಬೇಕು ಮತ್ತು ಯಹೂದರಿಗೆ ಹೋಲಿಕೆಯಾಗದಂತೆ ಎಚ್ಚರ ವಹಿಸಬೇ-ಕು ಎಂದು ಅವರಿಗೆ ಅವರ ಪ್ರವಾದಿ(ಸ) ಆಜ್ಞಾಪಿಸಿದ್ದನ್ನು ಅವರು ಅಕ್ಷರಶಃ ಪಾಲಿಸಿದ್ದಾರೆ. ಶೈತಾನನು ಆಜ್ಞಾಪಿಸಿದ ನೂತನಾಚಾರಗಳಿಂದ ಅವರು ಪೂರ್ಣವಾಗಿ ದೂರ ಸರಿದಿದ್ದಾರೆ. ಅಲ್ಲಾಹನಿಗೆ ಸ್ತುತಿ.” (ರಿಸಾಲತುನ್ ಫೀ ಅಹಾದೀಸಿ ಶಹ್ರಿಲ್ಲಾಹಿಲ್ ಮುಹರ್ರಂ ಪುಟ 13)

ಆಶೂರ ದಿನ ಉಪವಾಸದ ಹೊರತು ಬೇರಾವುದೇ ವಿಶೇಷ ಆರಾಧನೆ ದೃಢಪಟ್ಟಿಲ್ಲವೆಂದು ವಿದ್ವಾಂಸರು ಸ್ಪಷ್ಟವಾಗಿ ಹೇಳಿದ್ದಾರೆ. ಆಶೂರಾ ರಾತ್ರಿ ವಿಶೇಷ ನಮಾಝ್ ನಿರ್ವಹಿಸುವುದು, ಕಾಡಿಗೆ ಹಚ್ಚುವುದು, ಸುಗಂಧ ಹಚ್ಚುವುದು, ಕುಟುಂಬಕ್ಕೆ ಬೇಕಾಬಿಟ್ಟಿ ಖರ್ಚು ಮಾಡುವುದು ಮುಂತಾದ ಯಾವುದೂ ಮಾಡಬಾ-

ರದು. ಏಕೆಂದರೆ ಇಂತಹ ಯಾವುದೂ ಪ್ರವಾದಿ(ಸ)
ರವರು ಮಾಡಿದ್ದರೆಂದು ದೃಢಪಟ್ಟಿಲ್ಲ.